# ನಗರಸಭಾ ಕಾರ್ಯಾಲಯ, ಭದ್ರಾವತಿ

ನಂ: ದಾಸ್ತಾನುಸಿಆರ್:08/09-10 ದಿನಾಂಕ:15-01-10

## <u>ಟೆಂಡರ್ ಪ್ರಕಟಣೆ</u>

ಭದ್ರಾವತಿ ನಗರಸಭೆಯ ನೀರು ಶುದ್ಧೀಕರಣ ಘಟಕಕ್ಕೆ **2010-11** ನೇ ಸಾಲಿಗೆ ಅವಶ್ಯಕವಿರುವ ಈ ಕೆಳಕಂಡ ಸಾಮಗ್ರಿಗಳನ್ನು ಖರೀದಿ ಮಾಡಲು ಐಟಂ ವಾರು ದರದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತಿವುಳ್ಳವರು ದಿನಾಂಕ:**20-02-10** ರ ಸಂಜೆ **4-30** ಗಂಟೆಯೊಳಗಾಗಿ ದರಪಟ್ಟಿಯನ್ನು ದ್ವಿಪ್ರತಿಯಲ್ಲಿ ಪೌರಾಯುಕ್ತರು ನಗರಸಭೆ ಭದ್ರಾವತಿ ರವರಿಗೆ ಸಲ್ಲಿಸಬಹುದಾಗಿದೆ. ಇತರೆ ಷರತ್ತುಗಳಿಗೆ ನಗರಸಭೆಯ ವೆಬ್ ಸೈಟ್ **www.bhadravathicity.gov.in** ನಲ್ಲಿ ಪಡೆಯಬಹುದು.

| ಕ್ರಮ ಸಂಖ್ಯೆ | ಸಾಮಗ್ರಿ ವಿವರ | ಅವಶ್ಯಕವಿರುವ ಅಂದಾಜು ಪ್ರಮಾಣ | EMD ಮೊತ್ತ ರೂಗಳ್ಳಲ್ಲಿ | ಟೆಂಡರ್ ಫಾರಂ ಬೆಲೆ ರೂ ಗಳಲ್ಲಿ |
|---|---|---|---|---|
| 01 | 01.ಫೆರಿಕ್ ಆಲಂ (ಅಲ್ಯುಮಿನಿಯಂ ಪ್ರಮಾಣ15% ಗಿಂತ ಕಡಿಮೆ ಇಲ್ಲದಂತೆ.)<br>02. ಸ್ಟೆಬಲ್ ಬ್ಲೀಚಿಂಗ್ ಪೌಡರ್ (ಕ್ಲೋರಿನ್ ಪ್ರಮಾಣ 33 % ಗಿಂತ ಕಡಿಮೆ ಇಲ್ಲದಂತೆ)<br>03. ಕ್ಲೋರಿನ್ ಸಿಲಿಂಡರ್. ಪ್ರತಿ ಟನ್ ಭರ್ತಿ ಮಾಡುವುದು. (ಕ್ಲೋರಿನ್ ಪ್ರಮಾಣ 33 % ಗಿಂತ ಕಡಿಮೆ ಇಲ್ಲದಂತೆ)<br>04. ಸುಣ್ಣ (Lime)<br>05. ಪಾಲಿ ಅಲ್ಯುಮಿನಿಯಂ ಕ್ಲೋರೈಡ್ (ಅಲ್ಯುಮಿನಿಯಂ ಪ್ರಮಾಣ30 % ಗಿಂತ ಕಡಿಮೆ ಇಲ್ಲದಂತೆ.) | 300 Ton<br>20 Ton<br>10 Ton<br>10 Ton<br>100 Ton | ರೂ 25,000-00 | ರೂ 500-00 |

### <u>ಷರತ್ತುಗಳು</u>

1. ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ಪಡೆಯಲು ಕಡೆಯ ದಿನಾಂಕ:**19-02-10** ರ ಸಂಜೆ **5-30** ರ ವರೆಗೆ.
2. ಟೆಂಡರ್ ನ್ನು ದಿನಾಂಕ:**20-02-2010** ರ ರಂಜೆ **5-00** ಗಂಟೆಗೆ ಹಾಜರಿರುವ ಟೆಂಡರ್ ದಾರರ ಸಮಕ್ಷಮ ತೆರೆಯಲಾಗುವುದು ತಪ್ಪಿದಲ್ಲಿ ಮುಂದಿನ ದಿನಾಂಕವನ್ನು ತಿಳಿಸಲಾಗುವುದು.
3. ಕಡ್ಡಾಯವಾಗಿ 2008-09 ನೇ ಸಾಲಿನ ವರಮಾನ ತೆರಿಗೆ, ಅಸಸೆಮೆಂಟ್ ಹಾಗು VAT Registration Certificate ಗಳನ್ನು ದರಪಟ್ಟಿಗಳ ಜೊತೆಗೆ ಲಗತ್ತಿಸುವುದು
4. ನಗರಸಭೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಿಲ್ ಪಾವತಿಸಲಾಗುವುದು.
5. ನಮೂದಿಸಿದ ದರದಂತೆ ಟೆಂಡರ್ ಅಂಗೀಕರಿಸದ ದಿನಾಂಕದಿಂದ **31-3-2011** ರವರಗೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು.
6. EMD ಹಣದ ಡಿ.ಡಿ ಯನ್ನು ಪೌರಾಯುಕ್ತರು, ನಗರ ಸಭೆ ಭದ್ರಾವತಿ ರವರ ಹೆಸರಿನಲ್ಲಿ ಪಡೆದು ಟೆಂಡರ್ ನೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

7. ಎಲ್ಲಾ ತೆರಿಗೆ ಸೇರಿಸಿ ದರ ನಮೂದಿಸತಕ್ಕದ್ದು.ಹಾಗೂ ಸಾಮಗ್ರಿಗಳನ್ನು ಈ ಕಛೇರಿಗೆ ಸರಬರಾಜು ಮಾಡುವ ಸಂಧರ್ಭದಲ್ಲಿ ಗುಣಮಟ್ಟದ ಬಗ್ಗೆ ತಪಾಸಣೆಗೊಳಿಸಿ ಧೃಢೀಕರಣ ಪತ್ರವನ್ನು ಕಡ್ಡಾಯವಾಗಿ ಹಾಜರ್ಪಡಿಸತಕ್ಕದ್ದು.
8. ಯಶಸ್ವಿ ಟೆಂಡರ್ ದಾರರು ರೂ 100-00 ಗಳ ಛಾಪಾ ಕಾಗದಲ್ಲಿ 2010-11 ನೇ ಸಾಲಿನವರೆಗೆ ಅಗತ್ಯಕ್ಕೆ ಅನುಸಾರವಾಗಿ ಸಾಮಗ್ರಿಗಳನ್ನು ಸರಬರಾಜು ಮಾಡುವುದಾಗಿ ಮುಚ್ಚಳಿಕೆ ಪತ್ರ ಬರೆದುಕೊಡತಕ್ಕದ್ದು.
9. ಟೆಂಡರ್ ಸಲ್ಲಿಸುವವರು ದ್ವಿ ಪ್ರತಿಯಲ್ಲಿ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸುವವರು ಯಾವ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತದೆ ಎಂದು ಲಕೋಟೆಯ ಮೇಲೆ ವಿವರಣತ್ಮಾಕವಾಗಿ ನಮೊದಿಸಿ ಮೊಹರು ಮಾಡಿ ಸಲ್ಲಿತಕ್ಕದ್ದು.
10. ಟೆಂಡರ್ ಆಹ್ವಾನಿಸುವ ಪ್ರಾಧಿಕಾರವು ಯಾವುದೇ ಷರತ್ತುನ್ನು ವಿಧಿಸುವ ಅಥವಾ ಸಂಧರ್ಭಾನುಸಾರ ಯಾವುದೇ ಷರತ್ತನ್ನು ಸಡಿಲಿಸುವ ಅಧಿಕಾರವನ್ನು ಹೊಂದಿರುತ್ತದೆ.
11. ಟೆಂಡರ್ ನಲ್ಲಿ ಸೂಚಿಸಿರುವ ಸಾಮಗ್ರಿಗಳ ಪ್ರಮಾಣವು ಕಡಿಮೆ ಅಥವಾ ಹೆಚ್ಚಾಗುವ ಸಾದ್ಯತೆ ಇರುತ್ತದೆ.
12. ಟೆಂಡರ್ ದಾರರು ಟೆಂಡರ್ ಫಾರಂನಲ್ಲಿ ಎಲ್ಲಾ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು. ಮತ್ತು ನಮೊದಿಸುವ ಮೊತ್ತವನ್ನು ಸಂಖ್ಯೆ ಮತ್ತು ಅಕ್ಷರದಲ್ಲಿ ನಮೊದಿಸತಕ್ಕದ್ದು. ಯಾವುದೇ ತಿದ್ದುಪಡಿ ಇದ್ದಲ್ಲಿ ಸರಬರಾಜುದಾರರು ತಿದ್ದುಪಡಿ ಇದ್ದಲ್ಲಿ ಸರಬರಾಜುದಾರರು ತಿದ್ದುಪಡಿಯ ಮುಂದೆ ತಮ್ಮ ಪೂರ್ಣ ಸಹಿಯನ್ನು ಮಾಡತಕ್ಕದ್ದು.
13. ಟೆಂಡರ್ ಗಳನ್ನು ಅಂಗಿಕರಿಸುವ ಅಥವ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
14. ಈ ಟೆಂಡರ್ ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದ ವಿಭಾಗದಿಂದ ಪಡೆದುಕೊಳ್ಳಬಹುದಾಗಿದೆ.

Sd/-
(ಬಿ.ಡಿ.ಬಸವರಾಜಪ್ಪ)
ಪೌರಾಯುಕ್ತರು
ನಗರಸಭೆ, ಭದ್ರಾವತಿ